**ಸಾಕ್ಷಿಯನ್ನು ದಿಃ 23.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.

2. ನಾನು ಚಂದ್ರೇಶ ರವರ ಮೇಲೆ ದಾವೆ ಹಾಕಿದ್ದೇನೆ. ನಮಗೆ ಜಮೀನು ವ್ಯವಸಾಯ ಮಾಡಲು ಬಿಡುತ್ತಿಲ್ಲ ಎಂದು ಹಾಕಿರುತ್ತೇನೆ.

3. ದಾವಾ ಜಮೀನು ಈಗ ಪಾಳು ಬಿದ್ದಿದೆ. ಅದು ಈಗ 2 ವರ್ಷದಿಂದ ಪಾಳು ಬಿದ್ದಿದೆ, ಈ ದಾವೆ ಹಾಕಿದ ನಂತರ ಪಾಳು ಬಿದ್ದಿದೆ.

4. ದಾವಾ ಜಮೀನು ನನಗೆ ನನ್ನ ತಂದೆಗೆ ನನ್ನ ತಾತನಿಂದ ಬಂದಿದೆ, ನನಗೆ ನನ್ನ ತಂದೆಯಿಂದ ಬಂದಿದೆ.

5. ನನ್ನ ತಾತನ ಹೆಸರು ಅಣ್ಣೇಗೌಡ. ನನ್ನ ತಾತನಿಗೆ ಹೊಂಬಾಳಮ್ಮ ಒಬ್ಬರೇ ಪತ್ನಿ. ಅವರಿಗೆ ಅಣ್ಣೇಗೌಡ, ಸಿದ್ದಲಿಂಗೇಗೌಡ ಹಾಗೂ ಹೊಂಬಾಳಮ್ಮ ಎಂಬ ಮಕ್ಕಳು ಇರುತ್ತಾರೆ.

6. ಎಚ್.ಎ.ಹೊಮ್ಮೇಗೌಡ ನಿಮಗೆ ಏನಾಗಬೇಕು ಎಂದರೆ, ನನಗೆ ಗೊತ್ತಿಲ್ಲ.

7. ಸಿದ್ದಲಿಂಗಯ್ಯನಿಗೆ ಅಣ್ಣಯ್ಯ, ಪ್ರಕಾಶ ಹಾಗೂ ಗಣೇಶ ಎಂಬ ಗಂಡು ಮಕ್ಕಳು ಹಾಗೂ ಭಾಗ್ಯಮ್ಮ, ರಾಣಿ ಹಾಗೂ ಸುಜಾತಾ ಎಂಬ ಹೆಣ್ಣು ಮಕ್ಕಳು ಇರುತ್ತಾರೆ.

8. ಕವಿತಾ ಹರೀಶ ರವರು ರಾಣಿಯವರ ಮಕ್ಕಳು.

9. ಅಣ್ಣಯ್ಯನಿಗೆ ಕೃಷ್ಣಪ್ಪ ಎಂಬ ಒಬ್ಬ ಗಂಡು ಹಾಗೂ ಚಂದ್ರಕ್ಕ, ತಿಮ್ಮಾಜಕ್ಕ ಎಂಬ ಇಬ್ಬರು ಹೆಣ್ಣು ಮಕ್ಕಳು.

10. ಹೆಚ್.ಎಸ್.ಅಣ್ಣಯ್ಯ ಹಾಗೂ ನೀವು ಇದೇ ನ್ಯಾಯಾಲಯದಲ್ಲಿ ಕಾಳಮ್ಮ ರವರ ಮೇಲೆ ಸ.ನಂ.153/6 ಕ್ಕೆ ಸಂಬಂಧಿಸಿದಂತೆ ಘೋಷಣಾತ್ಮಕ ದಾವೆ ಹಾಕಿದ್ದೀರಾ ಎಂದರೆ ಸರಿ. ಸದರಿ ದಾವೆಯಲ್ಲಿ ಕಾಳಮ್ಮ ನವರು ಹೊಮ್ಮೇಗೌಡರ ಹಂಡತಿ ಹಾಗೂ ಹೊಮ್ಮೇಗೌಡರು ಅಣ್ಣೇಗೌಡರ ಮಗ ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ.

11. ಸದರಿ ದಾವೆ ಅ.ದಾ.ನಂ.98/2023 ರಂತೆ ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ವಜಾ ಆಗಿದೆ ಎಂದರೆ ಸರಿಯಲ್ಲ.

12. ಸದರಿ ದಾವೆಯಲ್ಲಿ ಅಣ್ಣೆಗೌಡನ ಮಗ ಹೊಂಬೇಗೌಡ ಹಾಗೂ ಅಣ್ಣೆಗೌಡನ ಹಿರಿಯ ಹೆಂಡತಿ ಮಕ್ಕಳ ನಡುವೆ ಆಗಿದೆ ಎಂದು ವಿಭಾಗ ಪತ್ರ ಹಾಜರುಪಡಿಸಿದ್ದೀರಿ ಎಂದರೆ ಸರಿ. ಸದರಿ ದಾವೆಯಲ್ಲಿ ಸದರಿ ವಿಭಾಗಪತ್ರವನ್ನು ನೀವೇ ಸೃಷ್ಠಿ ಮಾಡಿದ್ದೀರಾ ಎಂದು ವಜಾ ಆಗಿದೆ ಎಂದರೆ, ಸರಿಯಲ್ಲ.

13. ದಾವಾ ಆಸ್ತಿಗಳ ಸಂಬಂಧ ಹೊಂಬೇಗೌಡ, ಸಿದ್ದಲಿಂಗಯ್ಯ, ಅಣ್ಣಯ್ಯ ನವರ ನಡುವೆ ನೊಂದಣಿಯಾದ ವಿಭಾಗ ಪತ್ರ ನಿಮ್ಮ ಬಳಿ ಇದೆಯಾ ಎಂದರೆ, ವಿಭಾಗಪತ್ರ ಇದೆ, ನೊಂದಣಿ ಮಾಡಿಸಿಲ್ಲ ಎಂದು ನುಡಿಯುತ್ತಾರೆ.

14. ಸ.ನಂ.139/3 ರಲ್ಲಿ 1 ಎಕರೆ 7 ಗುಂಟೆ ಜಮೀನು, ಸ.ನಂ.139/7 ರಲ್ಲಿ 8 ಗುಂಟೆ, 139/1 ರಲ್ಲಿ 1 ಎಕರೆ 10 ಗುಂಟೆ, ಸ.ನಂ.139/4 ರಲ್ಲಿ 39 ಗುಂಟೆ ಹಾಗೂ ಇತರೇ ಸರ್ವೇ ನಂಬರ್ ಗಳ ಸಂಬಂಧ ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ಅ.ದಾ.ನಂ.276/2023 ರಂತೆ ಸರೋಜಮ್ಮ, ಕಾಳಮ್ಮ, ಶಕುಂತಲ, ಚಂದ್ರಹಾಸ, ರೂಪ ಹಾಗೂ ನವೀನ ರವರು ನಿಮ್ಮ ವಿರುದ್ಧ ಭಾಗಾಂಶ ಕೋರಿ ದಾವೆ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

15. ನೀವು ಸದರಿ ದಾವೆಯಲ್ಲಿ ವಕೀಲರ ಮೂಲಕ ತಕರಾರು ಹಾಕಿದ್ದೀರಾ ಎಂದರೆ, ಹಾಕಿರಬಹುದು ಎಂದು ನಡಿಯುತ್ತಾರೆ. ಸದರಿ ದಾವೆ ಈಗ ವಿಚಾರಣೆ ಹಂತದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

16. ಸದರಿ ದಾವೆಯಲ್ಲಿ ನೀವು ಏನು ತಕರಾರು ಹಾಕಿದ್ದೀರಾ ಎಂದು ಮಾಹಿತಿ ಇದೆಯಾ ಎಂದರೆ, ಗೊತ್ತಿಲ್ಲ.

17. ದಾವಾ ಆಸ್ತಿಗಳು ನಿಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ.

18. ಪ್ರತಿವಾದಿಗಳು ದಾವಾ ಆಸ್ತಿಗಳಿಗೆ ಯಾವಾಗ ತೊಂದರೆ ಕೊಟ್ಟರು ಎಂದರೆ, 2023 ರಲ್ಲಿ ತೊಂದರೆ ಕೊಟ್ಟಿರುತ್ತಾರೆ, ದಿನಾಂಕ ಗೊತ್ತಿಲ್ಲ. ಆ ಸಂಬಂಧ ಪೊಲೀಸರಿಗೆ ದೂರು ನೀಡಿದ್ದೀರಾ ಎಂದರೆ, ಕೊಟ್ಟಿದ್ದೇವೆ.

19. ನೀವು ಈ ದಾವೆ ಹಾಕುವ ಮುಂಚೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರತಿವಾದಿಗಳು ಭಾಗಾಂಶ ಕೋರಿ ಹಿರಿಯ ನ್ಯಾಯಾಲಯದಲ್ಲಿ ದಾವೆ ಹಾಕಿದ್ದರು ಎಂದರೆ, ಹಾಕಿರಬಹುದು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಈ ವಾದಪತ್ರದಲ್ಲಿ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ, ಅದೇ ಬೇರೆ ಇದೇ ಬೇರೆ ಎಂದು ನುಡಿಯುತ್ತಾರೆ.

20. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ